977(1560) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸ್ಪಡ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಸಣ್ಣ ಉಳಿತಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಜ್ಞಾನ ಕೇಂದ್ರವನ್ನು ಸೌದತ್ತಿಯಲ್ಲಿ ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮವೇನು?

ಶ್ರೀ ಬಸವರಾಜ. ಎಸ್.ಹೊರಟ್ಟಿ (ವಿಜ್ಞಾನ ,ತಂತ್ರಜ್ಞಾನ ಮತ್ತು ಸಣ್ಣ ಉಳಿತಾಯ ಸಚಿವರು):

ಅ) ಅಂತಹ ಪ್ರಸ್ತಾವನೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ.

978(1361) ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಐತಿಹಾಸಿಕ ಪರಂಪರೆಯ ಕೇಂದ್ರಗಳೆಂದು ಗುರುತಿಸಿರುವ ಸ್ಥಳಗಳಾವುದು;

ಆ) ಗುರುತಿಸಿರುವ ಪೈಕಿ ಪರಂಪರೆಯ ಕೇಂದ್ರಗಳಿಂದ ಕೈ ಬಿಟ್ಟಿರುವ ಸ್ಥಳಗಳಾವುವು ಹಾಗೂ ಅದಕ್ಕೆ ಕಾರಣಗಳೇನು;

ಇ) ಸದರಿ ಪಟ್ಟಿಯಲ್ಲಿ ಶ್ರೀರಂಗಪಟ್ಟಣ, ಬೀದರ್, ಬಿಜಾಪುರ, ಗುಲ್ಬರ್ಗ ಹಾಗೂ ಕಿತ್ತೂರು ಐತಿಹಾಸಿಕ ಸ್ಥಳಗಳು ಸೇರಲ್ಪಟ್ಟಿವೆಯೇ (ಹಾಗಿದ್ದಲ್ಲಿ ವಿವರ ನೀಡುವುದು)

ಈ) ಸೇರದಿದ್ದಲ್ಲಿ, ಈ ಎಲ್ಲಾ ಕೇಂದ್ರಗಳನ್ನು ವಿಶ್ವ ಪರಂಪರೆ ಕೇಂದ್ರಗಳೆಂದು ಘೋಷಿಸಲಾಗಿದೆಯೇ;

ಉ) ಹಾಗಿದ್ದಲ್ಲಿ ಇವುಗಳ ಸಂರಕ್ಷಣೆ ಹಗೂ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ಹಾಗೂ ನೀಡಿರುವ ಹಣವೆಷ್ಟು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಮೈಸೂರು, ಶ್ರೀರಂಗಪಟ್ಟಣ, ಬಿಜಾಪುರ, ಗುಲ್ಬರ್ಗಾ, ಬೀದರ್ ಮತ್ತು ಕಿತ್ತೂರನ್ನು ಪಾರಂಪರಿಕ ಪ್ರದೇಶಗಳೆಂದು ಗುರುತಿಸಲಾಗಿದೆ.

ಆ) ಗುರುತಿಸಲಾಗಿರುವ ಮೇಲ್ಕಂಡ ಸ್ಥಳಗಳ ಪೈಕಿ ಯಾವುದನ್ನೂ ಕೈಬಿಟ್ಟಿರುವುದಿಲ್ಲ.

ಇ) ಹೌದು

ಈ) ಉದ್ಭವಿಸುವುದಿಲ್ಲ.

ಉ) ಮೇಲ್ಕಂಡ ಸ್ಥಳಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಗಳಿಗಾಗಿ ಪರಂಪರಾ ಆಯುಕ್ತರ ಹುದ್ದೆಯನ್ನು ಸೃಜಿಸಲಾಗಿದೆ.

ಮೈಸೂರು–ಶ್ರೀರಂಗಪಟ್ಟಣ ಪಾರಂಪರಿಕ ಪ್ರದೇಶಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ತಜ್ಞರ ಸಮಿತಿ ರಚನೆಯಾಗಿರುತ್ತದೆ.

2004–05ನೇ ಸಾಲಿಗೆ ರೂ. 135.00 ಲಕ್ಷ ಅನುದಾನ ನಿಗದಿಗೊಳಿಸಿದೆ.